ಮಧುಗಿರಿಯ ಯಾಚೇನಳ್ಳಿ ಗ್ರಾಮದಲ್ಲಿ ದಿನಬೆಳಕು ಇಂಗಿ ರಾತ್ರಿಯ ಕತ್ತಲೆ ಮೂಡುತ್ತಲಿದೆ, ಅಪರ್ಣಾಳ ಬದಿಕಿನಲ್ಲೂ ಕೂಡ. 'ಅಪ್ಪ ಎಲ್ಲಮ್ಮ?, 'ಅಪ್ಪನ ಫೋಟೊ ಯಾಕೆ ಟೀವಿಯಲ್ಲಿ ತೋರಿಸುತ್ತಿದ್ದಾರೆ?', 'ಅಪ್ಪ ಯಾವಾಗ ಮನೆಗೆ ಬರುತಾರೆ?' – ನಾಲ್ಕು ವರ್ಷದ ಮಗಳು ರೇವತಿಯ ಪ್ರಶ್ನೆಗೆ ಉತ್ತರ ನೀಡಲು ತಲ್ಲಣಿಸುತಿದ್ದಾಳೆ ಅಪರ್ಣಾ. ತನ್ನ ಮಗಳನ್ನು ಕರೆದು ಆಕಾಶಕ್ಕೆ ಬೆರಳುಮಾಡಿ ಅತೀ ಪ್ರಕಾಶಮಾನವಾಗಿ ಹೊಳೆಯುತ್ತಿರುವ ನಕ್ಷತ್ರವೊಂದನ್ನು ತೋರಿಸಿ, 'ಅಗೋ ಅಲ್ಲಿದ್ದಾರೆ ನಿಮ್ಮ ತಂದೆ' ಎಂದು ಮಗಳಿಗೆ ಸಮಾಧಾನ ಮಾಡ ಮಾಡುತ್ತಲೇ ದುಃಖ ತಡೆಯಲಾರದೆ ಕಣ್ಣು ತುಂಬಿ ಬರುತ್ತವೆ. 10 ತಿಂಗಳು ಪ್ರಾಯದ ಕೂಸು ಕೈಯಲ್ಲಿ ಆಟಿಕೆ ಹಿಡಿದು ತನ್ನಷ್ಟಕ್ಕೆ ನಗುತ್ತಿದೆ, ಆ ಕಂದನಿಗಂತೂ ಅಪ್ಪನ ಸಾಮಿಪ್ಯದ ಅನುಭವವೇ ಇಲ್ಲ.

ನಮ್ಮ ದೇಶದ ವೀರಯೋಧರು ಭಯೋತ್ಪಾದನೆಗೆ ಬಲಿಯಾಗುತ್ತಿರುವುದು ಅಪರೂಪದ ಘಟನೆ ಏನಲ್ಲ. ದೇಶದ ಪ್ರತಿ ಒಬ್ಬರ ಸುರಕ್ಷತೆಗಾಗಿ, ದೇಶದ ಭದ್ರತೆಗಾಗಿ ತನ್ನ ಪ್ರಾಣವನ್ನೇ ಒತ್ತೆಯಿಟ್ಟ ಯೋಧರಿಗೆ ನಮ್ಮೆಲ್ಲರ ಮನಸಿನಲ್ಲಿ ಪೂಜ್ಯ ಸ್ಥಾನ ನೀಡಿದ್ದೇವೆ. ಅಲ್ಲಿಗೆ ಮುಗಿಯಿತೇನು ದೇಶಭಕ್ತಿ? ಈ ವೀರಯೋಧರ ಸಾವು, ಅವರ ಕುಟುಂಬಕ್ಕೆ ಶಾಶ್ವತ ಕಣ್ಣೀರು ಬಾಕಿ ಇರಿಸುತ್ತದೆ. ಅಪರ್ಣಾಳಂತಹ ಯುವ ವಿಧವೆಯರಿಗೆ ಮುಂದಿನ ಬದುಕು ಹೊಸ ಸವಾಲುಗಳನ್ನು ಆಹ್ವಾನಿಸುತ್ತದೆ. ಆಕೆಯ ಪುಟ್ಟ ಮಕ್ಕಳಿಗೆ ತಂದೆ ಎಂಬುದು ಮಸುಕಾದ ಒಂದು ನೆನಪು ಮಾತ್ರವಾಗಿ ಉಳಿದುಬಿಡುತ್ತದೆ. ಚಿಕ್ಕಂದಿನಲ್ಲೇ ತಂದೆಯ ಪ್ರೀತಿಯಿಂದ ವಂಚಿತರಾದ ಯೋಧರ ಮಕ್ಕಳು ಏಕ ಪೋಷಕರಾದ ತಾಯಂದಿರ ಆರೈಕೆಯಲ್ಲೇ ತೃಪ್ತರಾಗಬೇಕು.

## ಯೋಧನ ವಧುವಿನ ಭಿನ್ನ ಬದುಕು

ಹದಿಹರೆಯದಲ್ಲಿ ಸಪ್ತಪದಿ ತುಳಿದು ತವರು ಮನೆ ತೊರೆದು ಬರುವ ಎಲ್ಲ ಹೆಣ್ಣೂ ಗಂಡನ ಆಸರೆ, ಆತನ ಸಾಮೀಪ್ಯ ಹಾಗು ಆತನೊಂದಿಗೆ ಸಂತೋಷಭರಿತವಾದ ಬದುಕಿನ ಕನಸು ಕಾಣುತ್ತಾಳೆ. ಆದರೆ ಯೋಧನ ಕೈ ಹಿಡಿದು ಹೆಂಡತಿಯ ಸ್ಥಾನಕ್ಕೆ ಬರುವ ಯುವತಿಯರು ಸಂತೋಷಪಡುವುದಕ್ಕೆ ಮೊದಲೇ ಮನೋಸ್ಥೈರ್ಯ, ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತಾರೆ. ತನ್ನ ಪತಿ ತನ್ನಿಂದ ದೂರವಾಗಿ ದೇಶಸೇವೆಯಲ್ಲಿ ತೊಡಗುವ ವೇಳೆಯಲ್ಲಿ, ಯೋಧನ ಕುಟುಂಬದ ಪೂರ್ಣ ಯೋಗಕ್ಷೇಮ ಅವನ ಪತ್ನಿಯ ಹೆಗಲೇರುತ್ತದೆ. ಯೋಧನ ತಂದೆ ತಾಯಂದಿರ ಆರೈಕೆ, ತನ್ನ ಬಾಣಂತನ, ಮಕ್ಕಳ ಆರೈಕೆ–ಶಿಕ್ಷಣ–ಹೀಗೆ ಮನೆಯ ಸಂಪೂರ್ಣ ಜವಾಬ್ದಾರಿ ಆಕೆಯದಾಗುತ್ತದೆ. ತನ್ನ ಜೀವನದುದ್ದಕ್ಕೂ ಗಂಡನಿಂದ ಸಂರಕ್ಷಣೆ ಎದುರುನೋಡುವುದನ್ನು ಮರೆತು ತಾನೇ ತನ್ನ ಕುಟುಂಬದ ಸಾರಥಿಯಾಗುತಾಳೆ. ವಿದ್ಯಾವಂತೆ ಆಗಿದ್ದರೂ ಉದ್ಯೋಗ ದೂರದ ಮಾತು. ನಮ್ಮ ದೈನಂದಿನ ಬದುಕಿನಲ್ಲಿ ಸಣ್ಣ ವ್ಯತ್ಯಾಸಕ್ಕೂ ಪರಿತಪಿಸುವ ನಾವು ಈ ಮಹಿಳೆಯರ ತ್ಯಾಗನ್ನು ನೆನಪು ಮಾಡಿಕೊಳ್ಳಲೇಬೇಕಾಗುತ್ತದೆ.

ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮೋಹಿನಿ ಗಿರಿ ಅವರು ಒಮ್ಮೆ, 'ವೈಧವ್ಯ ಎಂಬುದು ಸಾಮಾಜಿಕ ಸಾವು. ಈ ಅವಸ್ಥೆಗೆ ಜಾತಿ, ಆರ್ಥಿಕ ಭದ್ರತೆ ಯಾವುದೂ ಸಹಾಯಕವಾಗುವುದಿಲ್ಲ' ಎಂದು ಹೇಳಿದ್ದರು. ಇಂದಿಗೂ ಈ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ.

ದೇಶದ ಒಳ ಪ್ರದೇಶಗಳಲ್ಲಿನ ಯೋಧ ವಿಧವೆಯರ ಅವಸ್ಥೆ ಅತೀ ಕಷ್ಟಕರ. ಗಂಡನ ಸಾವಿನ ನಂತರ, ತನ್ನ ಒಪ್ಪಿಗೆಗೆ ವಿರುದ್ಧವಾಗಿ ಗಂಡನ ತಮ್ಮನನ್ನು ಮದುವೆ ಮಾಡಿಕೊಳ್ಳಬೇಕಾಗುತ್ತದೆ. ನಿನ್ನೆಯವರೆಗೆ ಅತ್ತಿಗೆ ಆಗಿದ್ದ ಹೆಣ್ಣು, ಇಂದಿನಿಂದ ಹೆಂಡತಿಯಾಗಿ ಪರಿವರ್ತನೆಗೊಳ್ಳಬೇಕಾಗುವುದು ಅತೀವ ಮಾನಸಿಕ ಗೊಂದಲಗಳನ್ನು ಸೃಷ್ಟಿಸುತ್ತದೆ. ವೀರಮೃತ್ಯು ಹೊಂದಿದ ಯೋಧನಿಗೆ ದೊರಕುವ ಪಿಂಚಣಿ, ಸರ್ಕಾರದಿಂದ ಬರುವ ಸಾಂತ್ವನ ಸಹಾಯಗಳು, ಸೌಲಭ್ಯಗಳು ಯೋಧನ ಕುಟುಂಬಕ್ಕೆ ಮಾತ್ರ ಸೀಮಿತವಾಗಿರಿಸಲು ಈ ರೀತಿ ಸಾಮಾಜಿಕವಾಗಿ ಕಟ್ಟುಪಾಡುಗಳನ್ನು ರೂಪಿಸಲಾಗಿದೆ.

## ನೆರವಿಗೆ ನೂರೆಂಟು ವಾರಸುದಾರರು

ಕೆಲವೊಮ್ಮೆ ಯೋಧನ ಹೆಸರಿನಲ್ಲಿ ಬರುವ ನೆರವು, ಕುಟುಂಬದ ಸದಸ್ಯರ ನಡುವೆ ಹಂಚಿಹೋಗುತ್ತದೆ. ಆ ನೆರವು ಯೋಧ ವಿಧವೆಗಾಗಲಿ, ಆಕೆಯ ಮಕ್ಕಳ ಭವಿಷ್ಯಕ್ಕಾಗಲಿ ಒದಗುವುದಿಲ್ಲ. 1996ರವರೆಗೂ, ಯೋಧನ ವಿಧವೆ ಆತನ ಕುಟುಂಬದ ಹೊರಗೆ ಮದುವೆಯಾದಲ್ಲಿ ಪಿಂಚಣಿ ಪಡೆಯಲು ಅರ್ಹತೆ ಇರಲಿಲ್ಲ.

ಉತ್ತರಪ್ರದೇಶದ, 90 ವರ್ಷ ವಯಸ್ಸಿನ ಜಶೋಬಾಬೈ (ಹೆಸರು ಬದಲಿಸಲಾಗಿದೆ) ಉಚ್ಚ ನ್ಯಾಯಾಲಯದಲ್ಲಿ 9 ವರ್ಷ ಕಾನೂನು ಸಂಘರ್ಷ ನಡೆಸಿದ ನಂತರ ಆಕೆಯ ಪಿಂಚಣಿಯನ್ನು 70 ರೂಪಾಯಿಯಿಂದ 18 ಸಾವಿರಕ್ಕೆ ಏರಿಸಲಾಯಿತು. 1971ರ ಯುದ್ಧದಲ್ಲಿ

